ನೀವು... ಅದಕ್ಕಿಂಥ ಭಾಗ್ಯ ನನಗೇನಿದೆ. ಗುರೂಜಿ, ನಿಜ ಹೇಳ್ತೀನಿ ನೀವು ನನ್ನನ್ನು ಹೇಗೆ ನೋಡಿದ್ದೀರ ಅನ್ನದು ನನ್ಗೆ ಗೊತ್ತಿಲ್ಲ ಅನ್ಕೋಬೇಡಿ. ಅವತ್ತು ನಾನು ಠುಮ್ರಿ ಹಾಡ್ತಿದ್ದೆ. ನನಗಿಂತ ನೀವು ಭಾವಪರವಶರಾಗಿದ್ರಿ. ಕಡೇಲಿ ನೀವು ಸಂಪೂರ್ಣ ಬೆವತಿದ್ರಿ, ನಿಮ್ಮಲ್ಲಿ ರಸೋತ್ಪತ್ತಿ ಆಗಿದ್ದು ನಂಗೊತ್ತಿಲ್ಲ ಅಂದುಕೊಂಡ್ರಾ? ಹಾಗೇ ನೀವು ಹಾಡೋವಾಗ ನನ್ನ ಸರ್ವಾಂಗಗಳೂ ಪುಳಕಕ್ಕೆ ಸಜ್ಜಾಗತ್ವೆ. ಗೊತ್ತಾ ನಿಮ್ಗೆ? ಏನು ಗುರೂಜಿ... ಕೇವಲ ವಯಸ್ಸಿನ ಅಂತರ... ಅಷ್ಟೇ ತಾನೆ? ನಂಗೆ ನಿಮ್ಮ ಮೇಲೆ ಪ್ರೇಮ, ಭಕ್ತಿ, ಗೌರವ ಎಲ್ಲಾ ಇದೆ. ನಿಮಗೂ ನನ್ಮೇಲೆ... ಹಾಗಿದ್ದಾಗ ವಯಸ್ಸಿನ ಅಡ್ಡಿಯನ್ನು ನಾವ್ಯಾಕೆ ದಾಟಬಾರದು? ನಾನು ಈ ಮನೆಯ ಗೃಹಲಕ್ಷ್ಮಿ ಆಗೋಕ್ಕೆ ತಯಾರಿದ್ದೀನಿ. ನಿಮ್ಮ ಶ್ರೀಮತಿಯಾಗಿ ಮಾತ್ರ. ನಿಮ್ಮ ಸೊಸೆಯಾಗಲ್ಲ. ಇನ್ನೂ ಒಂದು ಮಾತು ಗುರೂಜಿ... ನಿಮಗೆ ನಿಮ್ಮ ಸಂಗೀತಾನ ಆರಾಧಿಸೋ ಆನಂದಿಸೋ ಪಕ್ಷಿ ಸಿಗಲಿಲ್ಲ ಅಂತ ಅಲವತ್ತುಕೊಳ್ತಿದ್ರಿ. ಈಗ ನಾನು ಸಿಕ್ಕಿದ್ದೀನಿ. ಈಗ ಯಾಕೆ ಬೇಡ ಅಂತೀರಿ. ಯೋಚ್ನೆ ಮಾಡಿ ನಾಳೆ ಹೇಳಿ' ಎನ್ನುತ್ತಾ ಎದ್ದು ಹೊರ ನಡೆದವಳ ಬೆನ್ನನ್ನೇ ನೋಡುತ್ತಾ. ಚಿತ್ತಕ್ಕೆ ಏನೊಂದು ಹೊಳೆಯದೆ ಭ್ರಮಿತರಂತೆ ಆಲೋಚನೆಗೂ ಅವಕಾಶವಿರದ ಗೊಂದಲದ ಗೂಡಾದ ಮನಸ್ಸಿನಲ್ಲಿ, ಅವಳಾಡಿದ ಒಂದೊಂದು ಮಾತನ್ನು ತೂಗ ತೊಡಗಿದರು. ಈ ವಯೋಮಾನದಲ್ಲಿ ತನಗಿಂತ ಅರ್ಧವಯಸ್ಸಿನ ಚಿಕ್ಕ ಕನ್ಯೆಯನ್ನು, ಮಗನಿಗೆ ಮದುವೆ ಮಾಡಬೇಕಾದಾಗ ತಾನು ವಿವಾಹವಾಗುವುದು... ಯಾಕೋ ಸರಿ ತೋರಲಿಲ್ಲ. 'ಆ ಹುಡುಗಿಗೆ ಕಿವಿಹಿಂಡಿ ಬುದ್ಧಿ ಹೇಳಬೇಕು. ಅವಳು ಬರಲಿ ನಾಳೆ' ಎಂದುಕೊಂಡರು.

ಎಲ್ಲವೂ ಸರಿಯೆ... ತಾನೀ ಪರಿ ತನ್ನ ವಿದ್ಯಾರ್ಥಿಯೊಬ್ಬಳನ್ನು ಕಾಯುವುದೆಂದರೆ... ಅವಳ ಬರುವಿಕೆಗಾಗಿ ಚಾತಕಪಕ್ಷಿಯಂತೆ ಕಾಯುವುದಾದರು ಯಾಕೆಂದು ಕೇಳಿಕೊಂಡಾಗ ಅವರ ಬಳಿ ಉತ್ತರವಿರಲಿಲ್ಲ. ಕಾಯುವುದೋ ತಪಿಸುವುದೋ ಅಥವಾ ಎರಡೂ ನಿಜವಿರಬಹುದೆ ಎನಿಸಿದಾಗ ನಾಚಿಕೆಯೊಂದು ಅವರ ಎದೆಯೊಳಗೆ ಹರಿದಾಡಿದಂತಾಯಿತು. ಅವಳ ಗುಂಗಿನಲ್ಲಿ ಅವಳನ್ನು ಕಾಯುತ್ತೇನೋ ಅಥವಾ ಅವಳ ಹಾಡುಗಾರಿಕೆಗೆ ಕಿವಿತೆರೆದು ಕುಳಿತುಕೊಳ್ಳುವ ಹಂಬಲವೋ... ಅವಳು ಹಾಡುತ್ತಿದ್ದರೆ ಕಿವಿಯೇನು ಮನಸ್ಸೇನು? ಇಡೀ ಶರೀರವೇ ಕಂಪನಕ್ಕೊಳಗಾಗುತ್ತಿತ್ತು. ಬರೀ ಅಷ್ಟಾಗಿದ್ದರೆ ಅವರಿಗೇನೂ ಅನ್ನಿಸುತಿರಲಿಲ್ಲ. ಅವರ ಗುರುಗಳು ಹೇಳಿದ ಅನನ್ಯ ಅನುಭವವೂ... ರತಿಯ ಉತ್ತುಂಗವೂ ನಾದದಲೆಗಳಿಂದ ಆಗಿ ಬಿಡುವ ವಿಶಿಷ್ಟ ಅನುಭೂತಿಯೂ ಒಮ್ಮೆ ಆಗಿಬಿಟ್ಟಿತ್ತು.

ಆ ದಿನ... ಛೇ! ನಾನವಳಿಗೆ ಆ ಠುಮ್ರಿಯನ್ನು ಹೇಳಲು ಕೇಳಬಾರದಿತ್ತು ಎಂದು ಅದೆಷ್ಟು ಬಾರಿ ಅಲವತ್ತುಕೊಂಡಿದ್ದರು. 'ಈ ದಿನ ಪಾಠಬೇಡ. 'ಯಾದ್ ಪಿಯಾಕಿ ಆಯೆ' ಹೇಳು' ಎಂದಿದ್ದರು. ತಂಬೂರವನ್ನು ಶ್ರುತಿ ಮಾಡಿಕೊಂಡು ಗುರುವಿನ ಕೈಗೆ ಕೊಟ್ಟು ಆಲಾಪದೊಂದಿಗೆ ಆರಂಭಿಸಿದಳು. ಆ ಧ್ವನಿಯ ಬಾಗು ಬಳುಕು ಬಂದಿಶ್‌ನಲ್ಲಿದ್ದ ತನ್ಮಯತೆ ಕಣ್ಮುಚ್ಚಿ ಮೈ ಮರೆತು ಗಾನದೊಳಗೆ ಲೀನವಾದಳು. ಅಲೆಅಲೆಯಾಗಿ ತೂಗುತ್ತಿದ್ದ ಆಲಾಪಗಳು ನಡುನಡುವೆ ತುಂಬುಗೊರಳಿನಿಂದ ಹೊಮ್ಮುತ್ತಿದ್ದ ಬಂದಿಶ್‌ಗಳು ಭಾವನಾಮಯ ರಸ ಪ್ರೋತಗಳು ಅವರ ಕಿವಿಗಳನ್ನು ಹೃದಯವನ್ನು ತಾಕಿ... ಮೊದಲು ಕಂಪಿಸತೊಡಗಿದ ಶರೀರ ನಂತರ ಎಲ್ಲ ಹಂಗು ತೊರೆದು ತನ್ನದೇ ಕಾಯಧರ್ಮಕ್ಕೆ ಈಡಾಗಿ ಬಿಟ್ಟಿತು. ಅವಳು 'ಸಗಮ ಸಾನೀ ನೀ ಧಮಾ' ಸ್ವರಗಳನ್ನು ಬೆಳೆಸಿದಾಗ ಅವಳು ತನ್ನನ್ನೂ ಬೆಳೆಸತೊಡಗಿದ್ದಾಳೆಂದು ಅನ್ನಿಸತೊಡಗಿತು. ತಮ್ಮ ಶರೀರದಲ್ಲಿ ತಂತಾನೆ ರಸೋತ್ಪತ್ತಿಯಾಗಿ ಎಲ್ಲಾ ಕವಾಟಗಳೂ ತೆರೆದು ಹಗುರಾಗಿಬಿಟ್ಟರು.